ದಿನಾಂಕಃ 25-09-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು:- ಆರೋಪಿಯ ಪರವಾಗಿ ಶ್ರೀ ಬಿ.ಆರ್. ವಕೀಲರಿಂದಃ-**

ಮಲ್ಲಪ್ಪರವರ ಹೆಸರಿನಲ್ಲಿ ಒಟ್ಟು 6 ಮನೆಗಳಿವೆ. 6 ಮನೆಗಳು ಇರುವ ಬಗ್ಗೆ ದಾನ ಪತ್ರ ಮತ್ತು ಖಾತಾ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ನಾನು ಎರಡು ಖಾತಾ ನಕಲುಗಳನ್ನು ಹಾಜರು ಪಡಿಸಿರುತ್ತೇನೆ. ಆ ರೀತಿ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಮಲ್ಲಪ್ಪರವರಿಗೆ ಸ್ವತ್ತು ಸಂಬಂಧಿಸಿದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಯಾವುದೇ ಉತ್ತರವನ್ನು ನೀಡದೇ ಮೌನವಾಗಿ ನಿಂತಿರುತ್ತಾರೆ. ಮಲ್ಲಪ್ಪರವರ ಹೆಸರಿನಲ್ಲಿ ಮೊದಲು 9 ವಿದ್ಯುತ್ ಮೀಟರ್ ಬೋರ್ಡುಗಳು ಇದ್ದವು. ಮೀಟರ್ ಬೋರ್ಡುಗಳಿಗಾಗಿ ಸಲ್ಲಿಸಿದ ಅರ್ಜಿಗಳನ್ನು ಹಾಜರು ಪಡಿಸಿರುವುದಿಲ್ಲ.

ಆರೋಪಿಗೆ ಸಂಬಂಧಿಸಿದ ಎಷ್ಟು ಮನೆಗಳಿವೆ ಎಂಬ ನನಗೆ ಗೊತ್ತಿರುವುದಿಲ್ಲ. ಆರೋಪಿಗೆ ಸಂಬಂಧಿಸಿದ 4 ಮೀಟರ್ ಬೋರ್ಡುಗಳು ಇದ್ದವು. ಆರೋಪಿಗೆ ಈಗ ಪ್ರಸ್ತುತ ಎಷ್ಟು ಮೀಟರ್ ಬೋರ್ಡುಗಳು ಇವೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಯ ಹೆಸರಿಗೆ ಇದ್ದ ಮೀಟರ್ ಬೋರ್ಡುಗಳನ್ನು ಅವರ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ಬ್ಯಾಂಕಿನಲ್ಲಿ ಸಾಲ ಪಡೆಯುವ ಮುನ್ನ ಕಾನೂನಾತ್ಮಕವಾಗಿ ಪರಿಶೀಲಿಸುತ್ತಾರೆ ಎಂದರೆ ಸರಿ. ಬ್ಯಾಂಕಿನಲ್ಲಿ ಸಾಲ ಪಡೆಯುವ ಬ್ಯಾಂಕಿನವರು ಬಂದು ಸ್ಥಳ ಪರಿಶೀಲನೆ ಮಾಡುತ್ತಾರೆ ಎಂದರೆ ಸರಿ. ಕಾನೂನಾತ್ಮಕವಾಗಿ ದಾಖಲೆಗಳು ಸರಿಯಿದ್ದರೆ ಬ್ಯಾಂಕಿನವರು ಸ್ವತ್ತನ್ನು ಅಡಮಾನ ಮಾಡಿಕೊಂಡು ಸಾಲ ನೀಡುತ್ತಾರೆ ಎಂದರೆ ಸರಿ. ಸಾಲದ ಅರ್ಜಿಯೊಂದಿಗೆ ಬಾವಚಿತ್ರಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಅಡಮಾನವನ್ನು ನೊಂದಣಿ ಮಾಡುವಾಗ ಇಬ್ಬರು ಪಕ್ಷಗಾರರು ಇರುತ್ತಾರೆ ಎಂದರೆ ಸರಿ.

ಆರೋಪಿಗೆ ಸಾಲ ಕೊಟ್ಟ ಬ್ಯಾಂಕಿನವರನ್ನು ಆರೋಪಿಯನ್ನಾಗಿ ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆ ಬ್ಯಾಂಕಿಗೆ ಹೋಗಿರುವುದಿಲ್ಲ ಮತ್ತು ಸಹಿ ಮಾಡಿರುವುದಿಲ್ಲ, ಆದರೆ ಆರೋಪಿಯು ಬೇರೆ ವ್ಯಕ್ತಿಯನ್ನು ನನ್ನ ತಂದೆ ಎಂದು ತೋರಿಸಿ ಸಹಿ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ ಹಾಗೂ ತನಗೆ ಈ ವಿಷಯದ ಬಗ್ಗೆ ಬೇರೆ ಏನು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೊಂದಣಿಯಾಗುವ ಸಮಯದಲ್ಲಿ

ಬಾವಚಿತ್ರವನ್ನು ನೊಂದಣಿ ಕಛೇರಿಯಲ್ಲಿ ತೆಗೆಯುತ್ತಾರೆ ಎಂದರೆ ಸರಿ. ಸದರಿ ನೊಂದಣಿ ದಾಖಲೆಗಳನ್ನು ಹಾಜರು ಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಈ ಪ್ರಕರಣದ ಬಗ್ಗೆ ಏನು ತಿಳಿದಿಲ್ಲ ಮತ್ತು ಈ ಬಗ್ಗೆ ನನ್ನ ತಂದೆ ಮತ್ತು ನನ್ನ 2 ನೇಯ ಅಣ್ಣನಿಗೆ ತಿಳಿದಿದೆ ಎಂದು ನುಡಿಯುತ್ತಾರೆ.

ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ನೀಡಿದಾಗ ಮೆಸ್ಕಾಂರವರು ಬಂದು ಸ್ಥಳ ಪರಿಶೀಲನೆ ಮಾಡುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ನನ್ನ ತಂದೆ ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ಸಹ ಆ ಸಮಯದಲ್ಲಿ ಹಾಜರು ಇರಲಿಲ್ಲ ಮತ್ತು ಸದರಿ ವಿಷಯವನ್ನು ನನ್ನ ತಂದೆ ತಿಳಿಸಿರುತ್ತಾರೆ. ನನ್ನ ತಂದೆ ಯಾವುದೇ ವಿದ್ಯುತ್ ಬೋರ್ಡುಗಳನ್ನು ಪಡೆಯಲು ಅರ್ಜಿ ನೀಡಿರಲಿಲ್ಲ ಮತ್ತು ಆರೋಪಿಯು ಆ ಬಗ್ಗೆ ಅರ್ಜಿ ನೀಡಿದ್ದರು ಎಂದರೆ ಸರಿಯಲ್ಲ.

ವಿದ್ಯುತ್ ಖಾತಾ ಸಂಖ್ಯೆ. 3488, 3489, 3490, 3494. ಎ.ಎ.ಹೆಚ್.ಸಂಖ್ಯೆಃ 793, 794 ಮತ್ತು 795. ಅದರೊಂದಿಗೆ 29677, 29678 ಸಹ ಇರುತ್ತವೆ. ಸದರಿ ಸಂಖ್ಯೆಗಳು ಯಾವ ಮನೆಗೆ ಸಂಬಂಧಿಸಿದ್ದು ಎಂದು ನನಗೆ ನಿಖರವಾಗಿ ತಿಳಿದಿರುವುದಿಲ್ಲ. ಈಗ 29677, 29678 ಶ್ರೀನಿವಾಸರವರ ಹೆಸರಿನಲ್ಲಿ ಇದೆಯೋ ಇಲ್ಲವೋ ಎಂದು ನನಗೆ ತಿಳಿದಿರುವುದಿಲ್ಲ. ಪ್ರಕರಣ ದಾಖಲಿಸುವಾಗ ಶ್ರೀನಿವಾಸರವರ ಹೆಸರಿನಲ್ಲಿತ್ತು. ಶ್ರೀನಿವಾಸರವರನ್ನು ಆರೋಪಿ ಮಾಡಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲವಕಾಶವನ್ನು ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಹಿ/-
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಕಡೂರು